ಫಾರೆಸ್ಟ್ ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷ್ನ.

ತಾರೀಖು 21ನೆ ಆಗಸ್ಟ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೀಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟೇಶನ್ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟು	ಕೋಠಿ.	ಹರಾಜು ತಾರೀಖು.	ಹರಾಜಿಗೆ ಇಡಲಾಗುವ ಸಂದಲ್ ಮರದ ಕಟ್ಟಿಗೆ ಪೌಂಡುಗಳು.	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವಂಬರ್ ತಾರೀಖು 18	200	
2	ಡಿಟೋ ...	ಸಾಗರ ...	ಡಿಟೋ 22	100	
3	ಡಿಟೋ ...	ಶಿವಮೊಗ್ಗ ...	ಡಿಟೋ 25	500	
4	ಕಡೂರು ...	ತರೀಕೆರೆ ...	ಡಿಟೋ 29	(a)200	(a) ಚಿತ್ರದುರ್ಗದ 10 ಟ್ರಂಗಳು ಶೇರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸೆಂಬರ್ ತಾರೀಖು 2	400	
6	ಹಾಸನ ...	ಹಾಸನ ...	ಡಿಟೋ 6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ 9	(b)100	(b) ತುಮಕೂರು 30 ಟ್ರಂಗಳು ಕೋಲಾರದ 5 ಟ್ರಂಗಳು ಶೇರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ 13	250	
9	ಡಿಟೋ ...	ಹುಣಸೂರು ...	ಡಿಟೋ 16	450	
			ಜುಮ್ಲಾ ...	2,400	

ಎಂ. ಮುತ್ತಣ್ಣ,
ಕ್ರ್ಯಸರ್ವೇಟರ್ ಆಫ್ ಫಾರೆಸ್ಟ್ಸ್, ಇ೯ ಮೈಸೂರು.

ತಾರೀಖು 28ನೆ ಆಗಸ್ಟ್, 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ತಾಲ್ಲೂಕುಗಳ ಸ್ಟೇಟ್ ಮತ್ತು ಡಿಸ್ಟ್ರಿಕ್ಟು ಜಂಗಲೆಗಳಲ್ಲಿಯೂ ಹಿಡುವಳಿ ಅಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅವ್ಯತಮಹಲ್ ಮತ್ತು ಪಬ್ಲಿಕ್ ಕ್ಯಾಟಲ್ ಕಾವಲುಗಳಲ್ಲಿಯೂ ದೊರೆಯುವ ಪಸಾರ ಜಿನಸುಗಳನ್ನು 1909ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1910ನೆ ಸೆಪ್ಟಂಬರು 30ನೆ ತಾರೀಖಿನ ವರಗೆ ಜಮಾಯಿಸುವ ಹಕ್ಕನ್ನು ಪಡೆಯಲು 1909ನೆ ಇಸವಿ ಸೆಪ್ಟಂಬರ್ ತಾರೀಖು 29ರ ವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ದರಖಾಸ್ತು ತೆಗದುಕೊಳ್ಳಲ್ಪಡುವದು. ಆದರೆ ಸ್ಟೇಟ್ ಫಾರೆಸ್ಟ್‌ಗಳಲ್ಲೂ ಮತ್ತು ಅವ್ಯತಮಹಲ್ ಕಾವಲುಗಳಲ್ಲೂ 1910ನೆ ಫೆಬ್ರವರಿ ತಾರೀಖು 28ರ ನಂತರ ಅಳಲೇಕಾಯಿ ಜಮಾವಣೆಗೆ ಅವಕಾಶ ಕೊಡುವದಿಲ್ಲ.

"ಜಿನಸುಗಳ ತಪಸೀಲು" ಎಂದು ಪರಾ ಮಾಡಿರತಕ್ಕದ್ದರ ಅಡಿಯಲ್ಲಿ 1ನೆ ಪ್ಯಾರಾದಲ್ಲಿ ನಮೂದು ಮಾಡಿರುವ ಸ್ಥಳಗಳಲ್ಲಿ ದೊರಕಬಹುದಾದ ಜಿನಸುಗಳನ್ನು ಜಮಾಯಿಸತಕ್ಕ ಹಕ್ಕಿಗೇನೇ ಬೇರೆ ದರಖಾಸ್ತನ್ನು ಕೊಡಬೇಕು.

ತಾಲ್ಲೂಕು.

1. ಮೈಸೂರು
2. ಶ್ರೀರಂಗಪಟ್ಟಣ
3. ನಾಗಮಂಗಲ
4. ಕೃಷ್ಣರಾಜಪೇಟೆ
5. ಮಂಡ್ಯ
6. ಮಳವಳ್ಳಿ
7. ಟಿ. ನರಸೀಪುರ
8. ನಂಜನಗೂಡು
9. ಚಾಮರಾಜನಗರ
10. ಗುಂಡ್ಲುಪೇಟೆ
11. ಹೆಗ್ಗಡದೇವನಕೋಟೆ
12. ಹುಣಸೂರು
13. ಯಡತೊರೆ

ಜಿನಸುಗಳ ತಪಸೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅಂಟವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡುಅಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲುಬೀಜ, 12. ಚಿಗಚಬೀಜ, 13. ಹೊಂಗೇಬೀಜ, 14. ಗೇರುಬೀಜ, 15. ಹಾಲುಮುಡ್ಡಿ, 16. ಉದರಿದ ಸಾರಗದಕೊಂಬು, 17. ಗುಗ್ಗಳ, 18. ಬೇಲದಹಣ್ಣು, 19. ಅರಗು, (ನಾರಾಯಣದುರ್ಗ ಸ್ಟೇಟ್ ಫಾರೆಸ್ಟ್ ವಿನಹಾ) 20. ಕಿತಾಫಲದಹಣ್ಣು, 21. ಬಂಡೆನಾರು, 22. ಬೀವಿನಬೀಜ, 23. ಇ

ಪ್ಲೇಬೀಜ, 24. ಅಳಲೇಕಾಯಿ; ಈ ಕೆಳಗೆ ವಿವರಿಸಿರುವ ನಾರಾಯಣದುರ್ಗದ ಸ್ಟೇಟ್ ಫಾರೆಸ್ಟ್ ಸುತ್ತ ಇರುವ ಹಳ್ಳಿಗಳ ಅಳಲೆ ಕಾಯಿ ಸೇರಿ ಇಲ್ಲ :—

ನಾಗಮಂಗಲದ ತಾಲ್ಲೂಕು ಬಾಬತು :—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂಡಿ, 5. ಇಂಡಸಹಳ್ಳಿ, 6. ಮಾರಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು :—1. ಗುಜಗಾನಹಳ್ಳಿ, 2. ಸಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಂಪುರ, 5. ಕೊಡಗಳ್ಳಿ, 6. ನಾಗಣಾಪುರ, 7. ಮಾದನಹಳ್ಳಿ, 8. ಕರ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು :—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚೆಬುಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಡಂಕಪುರ, 8. ಮಾದಿಗರಹೊಸಹಳ್ಳಿ, 9. ಚಾವಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಪ್ರತಿ ಬಂದು ತಾಲ್ಲೂಕಿಗೂ ಬೇರೆಬೇರೆ ದರಖಾಸ್ತು ಕೊಡತಕ್ಕದ್ದು ಮತ್ತು ಮೇಲೆ ವಿನಾಯಿತಿ ಮಾಡಿರತಕ್ಕ ಪ್ರದೇಶಕ್ಕೆ ಬೇರೆ ದರಖಾಸ್ತು ಕೊಡಬೇಕು.

3. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

4. ಪ್ರತಿ ಬಂದು ದರಖಾಸ್ತಿನೊಡನೆ (100) ಬಂದು ನೂರು ರೂಪಾಯಿನ ಕರ್ಣಿಸಿ ನೋಟ್ ತೇವಣಿ ಬಗ್ಗೆ ಕಳುಹಿಸಬೇಕು ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಸ್ಟರ್ ಮತ್ತು ಇನ್‌ಷೂರ್ ಮಾಡಿ ಲಿಫಾಫೆ ಮೇಲೆ "ಪಸಂದರಿ ದರಖಾಸ್ತು" ಎಂದು ಬರದು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಹೆಸರಿಗೆ ರವಾನಿಸಬೇಕು.

5. ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲ. ಮತ್ತು ಯಾವ ಕಾರಣವನ್ನು ನಮೂದಿಸದೇನೇ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

6. ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ 1909ನೆ ಇಸವಿ ಸೆಪ್ಟಂಬರ್ ತಾರೀಖು 30ರಲ್ಲಿ ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹಾಜರು ಇರುವ ದರಖಾಸ್ತುಗಾರರ ರೂಬರೂಬು ದರಖಾಸ್ತುಗಳನ್ನು ಪಡಿಯುವರು.

7. ದರಖಾಸ್ತು ಮಂಜೂರಾತಿ ಸಂಗತಿಯು ಸದರಿ ದರಖಾಸ್ತುದಾರನಿಗೆ ಕೂಡಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗು ಕೂಡಲೆ ವಾಪಸು ಮಾಡಲ್ಪಡುವದು.

8. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರಿಗೆ ತಿಳಿಸಿದ 3 ದಿವಸಗಳೊಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ತೇವಣಿ ಮೊಬಲಗು ಶೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಖಜಾನೆಗೆ ಪಾರಖಾವಣೆ ಮಾಡಬೇಕು. ತಪ್ಪಿದಲ್ಲಿ ಮೊದಲು ದರಖಾಸ್ತು ಸಂಗಡ ಕಳುಹಿಸಿದ ಹಣವನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಂಡು ಬಾಬನ್ನು ಸಹನೆ ದುಸರೇ ಹರಾಜು ಮಾಡಿಸಲಾಗುವದು.

9. ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ನಷ್ಟದ ಮೊಬಲಗು ರವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

10. ಈ ಕಂಟ್ರಾಕ್ಟು ಪರತ್ತು ಮೇರೆ ನಡೆಯಲು ಒಪ್ಪಿರುತ್ತೇನೆಂದು ಇಜಾರೆದಾರನು ಇಜಾರೆ ಮಂಜೂರಾದ 15 ದಿವಸಗಳೊಳಗಾಗಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ದುಸರ್ತಾ ಹರಾಜು ಮಾಡಲ್ಪಡುವದು.

11. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಅವನ ದರಖಾಸ್ತು ಮಂಜೂರಾದ ಸಂಗತಿಯನ್ನು ಅವನಿಗೆ ತಿಳಿಯಪಡಿಸಿದ ತಾರೀಖು ಲಾಗಾಯಿತು 15 ದಿವಸಗಳೊಳಗಾಗಿ ಪೂರ್ತಿ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಮೇಲ್ಕಂಡಂತೆ ವಾಯಿದೆ ಒಳಗಾಗಿ ಪಾವತಿ ಮಾಡಲು ತಪ್ಪಿದರ ಅವನ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾಗುತ್ತೆ. ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಪೂರಾ ಹಣ ಪಾವತಿ ಮಾಡಿದನಂತರ ಬಾಬು ಸುಪರ್ದು ಕೊಡಲಾಗುತ್ತೆ.

12. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇಜಾರೆದಾರರು ರೂಢಿಸಬೇಕು. ಹಾಗೆ ತಮ್ಮ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

13. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಗ್ರಾವು ಅವುರ್ಲೆ ಮತ್ತು ಸ್ವಂತ ಅವುರಾಯಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ. ಮತ್ತು ಬಾವಲಿ ಕೃತುವೆಯಲ್ಲಿರುವ ಜೇನಿಗೂ ಹಕ್ಕು ಇರುವದಿಲ್ಲ.

14. ಇನಾಂದಾರರ ಸ್ಥಿರಪಟ್ಟು ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

15. ಕಂಟ್ರಾಕ್ಟುದಾರನ ಅಥವಾ ಅವನಕಡೇ ಆಳುಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ವಗೈರೆ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

16. ಇಜಾರೆದಾರರ ಕಡೆ ಕೂಲಿ ಆಳುಗಳು ಬಾಬು ಜವಾಬಣೆ ಬಗ್ಗೆ ಸ್ಟೇಟು ಫಾರೆಸ್ಟುಗಳು ಮತ್ತು ಅವ್ಯತಮಹಲ್ ಕಾವಲುಗಳಿಗೆ ಪ್ರವೇಶಿಸಲು ರೇಂಜು ಆಫಿಸರುಗಳಿಂದ ಚೀಟಿಗಳನ್ನು ಪಡದುಕೊಳ್ಳತಕ್ಕದ್ದು.

ನೋ ೬ ಟಿ ಸ್.

ತಾರೀಖು 4ನೆ ಸೆಪ್ಟೆಂಬರ್ 1909.

ಈರೇಬಿನಲ್ಲಿ ನಮೂದಿರತಕ್ಕ ತರಹೇದ ಮರಗಳು ಮೈಸೂರು ಡಿಸ್ಟ್ರಿಕ್ಟ್ ಹೆಗ್ಗಡದೇವನಕೋಟೆ ತಾಲ್ಲೂಕು ಬಿಳತೂರು ಸ್ನಾನಘಟ್ಟದಬಳಿ ಬಿದ್ದಿರುತ್ತವೆ. ಇದಕ್ಕೆ ವಾರಸುದಾರ್ರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ್ಲಿ ವಾರಸು ಹಾಜರು ಮಾಡಬೇಕು. ತಪ್ಪುದಲ್ಲಿ ಈ ಮರಗಳು ಸರ್ಕಾರೀದೆಂತ ಭಾವಿಸಿ ಹರಾಜು ಮಾಡಲಾಗುತ್ತೆ. ಅನಂತರ ಬರತಕ್ಕ ವಾರಸುಗಳಿಗೆ ಗಮನ ಕೊಡಲು ಆಗುವದಿಲ್ಲ.

ತರಹೆ.	ಲಾಂಬಿ. ಅಡಿ.	ಅಂ.	ಸುತ್ತು. ಅಡಿ	ಅಂ.	ಗುರ್ತು.
1. ಸಾಗುವಾನಿ	10	0	3	0	ಎಂ. ಜಿ. ಎಫ್.
2. ಹತ್ತಿ ...	10	6	7	6	ಇಲ್ಲ.
3. ಡಿಟೋ ...	14	6	3	4	
4. ಡಿಟೋ ...	14	6	3	4	
5. ಡಿಟೋ ...	15	0	3	4	

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ಸ್ ೧೯೦೯ನೆ ಇಸವಿ ಆಗಸ್ಟು 7ನೆ ತಾರೀಖಿನಲ್ಲಿ ನಡೆದ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡು ಮಿಟಿಂಗ್ ಪ್ರೊಸೀಡಿಂಗ್ಸ್.

ಎಕ್ಸ್ ಅಫಿಷಿಯೋ ಮೆಂಬರುಗಳು.

ಹಾಜರು.

ಪ್ರೆಸಿಡೆಂಟ್, ಬಿ. ಜೆ. ಕುಮಾರಸ್ವಾಮಿನಾಯಿಕ್, ಎಸ್ಕ್ವಯರ್, ಬಿ.ಎ.

1. ವೈಸ್ ಪ್ರೆಸಿಡೆಂಟ್ ಮತ್ತು ಟ್ರೆಜರಿ ಆಫಿಸರ್ ಮಿ॥ ಟಿ. ಜೋಕ್ಕಣ್ಣನವರು, ಬಿ.ಎ.
2. ಬೆಂಗಳೂರು ಸಬ್ ಡಿವಿಜ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ವಿ. ಆರ್. ತ್ಯಾಗರಾಜ ಅಯ್ಯರ್, ಎಂ.ಎ.
3. ದೊಡ್ಡಬಳ್ಳಾಪುರದ ಸಬ್ ಡಿವಿಜ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ಕೆ. ಚಂಡಿ ಸಾಹೇಬರು, ಬಿ.ಎ.
4. ಬೆಂಗಳೂರು ಡಿಸ್ಟ್ರಿಕ್ಟ್ ಎಗ್ಸಿಕ್ಯೂಟಿವ್ ಇಂಜನಿಯರ್ ಮಿ॥ ಕೆ. ಕೃಷ್ಣಯ್ಯಂಗಾರ್ಯರವರು.
5. ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಮಿ॥ ಕೆ. ವೀರಭದ್ರಯ್ಯನವರು.
6. ಕೊಲ್ಲೇಸಪೇಟೆ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಮಿ॥ ಬಿ. ವೆಂಕೋಬರಾಯರು.

ಗೈರ್ ಹಾಜರು.

7. ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್ ಮಿ॥ ಜೆ. ಎಸ್. ಡೇವಿಡ್.

ನಾನ್ ಅಫಿಷಿಯಲ್ ಮೆಂಬರುಗಳು

ಹಾಜರು.

1. ಮಿ॥ ಚಿಕ್ಕಗುರುವಾರೆಡ್ಡಿ, ಬೆಂಗಳೂರು ತಾಲ್ಲೂಕು.
2. ,, ಶೀನಪ್ಪ, ಹೊಸಕೋಟೆ ತಾಲ್ಲೂಕು.
3. ,, ಕೋಲೂರು ರಾಮಣ್ಣ, ದೊಡ್ಡಬಳ್ಳಾಪುರ ತಾಲ್ಲೂಕು.
4. ,, ನರಹರಯ್ಯ, ನೆಲಮಂಗಲ ತಾಲ್ಲೂಕು.
5. ,, ಶಾಮಯ್ಯ, ಕಾನಕಾನಹಳ್ಳಿ ತಾಲ್ಲೂಕು.
6. ,, ರಾಮಚಂದ್ರರಾವ್, ಮಾಗಡಿ ತಾಲ್ಲೂಕು.
7. ,, ಕರಿಭಾಮೂ ನರಸಿಂಹ ಶೆಟ್ಟರು, ಕೊಲ್ಲೇಸಪೇಟೆ ಸಬ್ ತಾಲ್ಲೂಕು.
8. ,, ರಾಮಸಂಜೀವಯ್ಯ, ಚನ್ನಪಟ್ಣ ತಾಲ್ಲೂಕು.
9. ,, ಥಾಳಪ್ಪ, ಆನೇಕಲ್ ತಾಲ್ಲೂಕು.
10. ,, ಗುಂಡೂರಾವ್, ದೇವನಹಳ್ಳಿ ತಾಲ್ಲೂಕು.
11. ,, ಕೆ. ಸುಬ್ಬಣ್ಣ, ಬೆಂಗಳೂರು ತಾಲ್ಲೂಕು.
12. ,, ಎಸ್. ದಾಸಪ್ಪ, ನೆಲಮಂಗಲ ತಾಲ್ಲೂಕು.
13. ,, ಕೆ. ಪುಟ್ಟಪ್ಪ, ಆನೇಕಲ್ ತಾಲ್ಲೂಕು.
14. ,, ಎ. ರಾಮಣ್ಣ, ಹೊಸಕೋಟೆ ತಾಲ್ಲೂಕು.
15. ,, ಚನ್ನಲಿಂಗಪ್ಪ, ನೆಲಮಂಗಲ ತಾಲ್ಲೂಕು.

ಗೈರ್ಹಾಜರು.

1. ಮಿ॥ ಸಿ. ಜೆ. ಹಾರ್ಡಿ ಸಾಹೇಬರು.
2. ,, ಮುಸ್ತಾನ್‌ಸಾಬ್, ಚನ್ನಪಟ್ಣ ತಾಲ್ಲೂಕು (ಖಾಯಿಲೆ ಸಬಬು.)

ನೆಲಮಂಗಲ, ಚನ್ನಪಟ್ಟಣ, ಕಾರ್ಕಾರಹಳ್ಳಿ ತಾಲ್ಲೂಕು ಆವಿಾಲರುಗಳ ವಿನಹ ಮಿಕ್ಕ ಅವಲ್ದಾರ್ರುಗಳು ಹಾಜರಿದ್ದರು.